**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 968 /2021**

**ಚಾಸಾ ಃ- 05 / ಪ್ರಾಸಾ ಃ- 04**

| | |
|---|---|
| ಹೆಸರು | ಕೃಷ್ಣಪ್ಪ |
| ತಂದೆ ಹೆಸರು | ನರಸಿಂಹಯ್ಯ |
| ವಯಸ್ಸು | 52 |
| ಉದ್ಯೋಗ | ವ್ಯವಸಾಯ |
| ವಿಳಾಸ | ಕಲ್ಯಾ ಗ್ರಾಮ , ಮಾಗಡಿ ತಾಲ್ಲೂಕು |

ದಿನಾಂಕಃ **01.02.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ-1 ರಿಂದ 4 ಮತ್ತು 6 ಮತ್ತು 7 ರವರು ಪರಿಚಯ ಇರುವುದಿಲ್ಲ. ಆರೋಪಿಗಳು ಪರಿಚಯ ಇರುವುದಿಲ್ಲ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ದಿನಾಂಕ 04.05.2020 ರಂದು ಮಾಗಡಿ ಕ್ಷೇತ್ರದ ಶಾಶಕರಾದ ಎ. ಮಂಜುನಾಥ್ ರವರು ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆ ಅಡಿ ಹಾರೋಹಳ್ಳಿ ಗ್ರಾಮದಿಂದ ಬಸವನಪಾಳ್ಯ ಗ್ರಾಮದ ಮುಖಾಂತರ ಶ್ರೀಪತಿಹಳ್ಳಿ ಕಲ್ಯಾ ರಸ್ತೆ ವರೆಗೆ ರಸ್ತೆ ಕಾಮಗಾರಿಯ ಗುದ್ದಲಿ ಪೂಜೆ ಕಾರ್ಯಕ್ರಮಕ್ಕೆ ಬಸವನಪಾಳ್ಯಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ನಾನು ನಮ್ಮ

ಮುಖಂಡರಾದ ಪೂಜಾರಿ ಪಾಳ್ಯ ಕೃಷ್ಣಮೂರ್ತಿ, ಬಾಳೇನಹಳ್ಳಿ ರಾಜಶೇಖರ್, ಶ್ರೀಪತಿಹಳ್ಳಿ ಕೃಷ್ಣಪ್ಪ, ಹನುಮಾಪುರದ ಚಿಕ್ಕಣ್ಣ, ಕಲ್ಕೆರೆ ಉಮೇಶ, ಬಸವನಪಾಳ್ಯದ ಪಾಪಣ್ಣ, ಎಂ ಎಲ್‌ಎ ಸಿ ಪಿ ಎ ವೆಂಕಟೇಶ್ ಮತ್ತು ಇತರ ಮುಖಂಡರು ಹೋಗಿದ್ದೆವು ಎಂದರೆ ಸರಿಯಲ್ಲ. ಮಧ್ಯಾಹ್ನ 12.30 ಗಂಟೆಯಲ್ಲಿ ಶಾಶಕರಾದ ಎ.ಮಂಜುನಾಥ್ ರವರು ರಸ್ತೆ ಕಾಮಗಾರಿಗೆ ಬಸವನಪಾಳ್ಯದಲ್ಲಿ ಗುದ್ದಲಿ ಪೂಜೆ ಮಾಡಲು ಮುಂದಾದಾಗ ಬಸವನಪಾಳ್ಯ ಗ್ರಾಮದ ಬಿ ಕೆ ಕುಮಾರ್ ಬಿನ್ ಕೆಂಪಯ್ಯ, ರವಿಕುಮಾರ್ ಬಿನ್ ಕುಮಾರ್, ಮನು ಬಿನ್ ನಾಗರಾಜು, ನರಸಿಂಹಮೂರ್ತಿ ಬಿನ್ ನಾಗರಾಜು, ಸಾತನೂರು ಗ್ರಾಮದ ಶ್ರೀಧರ್ ಬಿನ್ ಗೋವಿಂದಪ್ಪ, ವೇಣು ಬಿನ್ ಕುಮಾರ್ ಎಂಬುವವರು ಗುಂಪು ಕಟ್ಟಿಕೊಂಡು ಬಂದು ಬಿ.ಕೆ.ಕುಮಾರ್ ರವರು ಶಾಶಕರಿಗೆ ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈಯ್ದು ಸರ್ಕಾರಿ ಕಾರ್ಯಕ್ರಮವಾದ ರಸ್ತೆ ಗುದ್ದಲಿ ಪೂಜೆ ಹಾಗೂ ಶಾಶಕರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂದರೆ ಸರಿಯಲ್ಲ. ಆ ವೇಳೆ ನೂಕು ನುಗ್ಗಲು ಉಂಟಾಯಿತು ಎಂದರೆ ಸರಿಯಲ್ಲ. ಶಾಶಕರ ಗನ್ ಮ್ಯಾನ್ ಮತ್ತು ನಾವುಗಳು ಸಮಾಧಾನ ಮಾಡಿದೆವು ಎಂದರೆ ಸರಿಯಲ್ಲ. ಬಿ.ಕೆ. ಕುಮಾರ್ ಈ ಕಾಮಗಾರಿ ಮಾಡಲು ಬಿಡುವುದಿಲ್ಲ ಅದೇಗೆ ರಸ್ತೆ ಮಾಡುತ್ತೀರೋ ನೋಡುತ್ತೇನೆ ಎಂದು ಬೆದರಿಕೆ ಹಾಕಿದನು ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಗೊತ್ತಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ–3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ- ಶ್ರೀ. ಆರ್ ಎಸ್?**ವಕೀಲರಿಂದ **ಆರೋಪಿಗಳ** ಪರವಾಗಿ ಃ-
ಆರೋಪಿ ಪರ ವಕೀಲರು ಪಾಟೀಸವಾಲುಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**